ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**<u>ಸಿ.ಸಿ. ಸಂಖ್ಯೆ: 92</u>/2024**

ಪ್ರ.ವ.ಬೋ.ತಾಃ 08-04-2026

ಚಾಸಾಃ 15 ಫ್ರಾಸಾಃ 8

| | |
|---|---|
| ಸಾಕ್ಷಿಯ ಹೆಸರು | ನಟರಾಜು |
| ತಂದೆ/ಗಂಡನ ಹೆಸರು | ನರಸಪ್ಪ |
| ವಯಸ್ಸು | 38 ವರ್ಷ |
| ವೃತ್ತಿ | ವ್ಯವಸಾಯ |
| ವಾಸ | ಮಾರನಹಳ್ಳಿ, ಮಧುಗಿರಿ ತಾ. |

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-</u>**

ನನಗೆ ಆರೋಪಿ ಗೊತ್ತಿಲ್ಲ. ನಾನು ಹೀರೋ ಹೋಂಡಾ ದ್ವಿಚಕ್ರ ವಾಹನ ಸಂಃ ಕೆಎ-06-ಹೆಚ್ ಟಿ-6706 ವಾಹನದ ಮಾಲೀಕನಾಗಿರುತ್ತೇನೆ. ನನ್ನ ವಾಹನ ಅಪಘಾತವಾದ ಬಗ್ಗೆ ಪೊಲೀಸರು ನನಗೆ ಮೋಟಾರು ವಾಹನ ಕಾಯಿದೆ ಕಲಂ 133 ರ ಅಡಿಯಲ್ಲಿ ನೋಟೀಸ್ ನೀಡಿದ್ದು, ಆ ನೋಟೀಸನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.12 ಎಂದು, ಸಾಕ್ಷಿಯ ಸಹಿಯನ್ನು ನಿಪಿ.12(ಎ) ಎಂದು ಗುರುತಿಸಲಾಯಿತು. ಅದಕ್ಕೆ ನಾನು ಮರು ಉತ್ತರವನ್ನು ನೀಡಿರುತ್ತೇನೆ. ಆ ಮರು ಉತ್ತರವನ್ನು ನಿಪಿ.13 ಎಂದು, ಸಾಕ್ಷಿಯ ಸಹಿಯನ್ನು ನಿಪಿ.13(ಎ) ಎಂದು ಗುರುತಿಸಲಾಯಿತು. ಅವುಗಳಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಬಾಬ್ತು ದ್ವಿಚಕ್ರ ವಾಹನವನ್ನು ಇಂಡೆಮ್ನಿಟಿ ಬಾಂಡ್ ಬರೆದುಕೊಟ್ಟು

ನನ್ನ ವಶಕ್ಕೆ ಪಡೆದುಕೊಂಡಿರುತ್ತೇನೆ. ಆ ಇಂಡೆಮ್ನಿಟಿ ಬಾಂಡ ನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.14 ಎಂದು, ಸಾಕ್ಷಿಯ ಸಹಿಯನ್ನು ನಿಪಿ.14(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸಸಅ ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ</u>– ಮಾನ್ಯ ಸ.ಸ.ಅ. ರವರಿಂದಃ–**

ದಿಃ 28.08.2024 ರಂದು ನನ್ನ ಬಾಬ್ತು ಸಂಃ ಕೆಎ–06–ಹೆಚ್ ಟಿ–6706 ನ್ನು ಆರೋಪಿಯ ಮದುವೆಯ ನಿಮಿತ್ತ ಚಲಾಯಿಸಲು ಆತನಿಗೆ ನೀಡಿದ್ದು, ಅದೇ ದಿನ ಮಧ್ಯಾಹ್ಞ 2.30 ಗಂಟೆ ಸಮಯದಲ್ಲಿ ಆ ದ್ವಿಚಕ್ರ ವಾಹವನ್ನು ಮಧುಗಿರಿ ಶಿರಾ ರಸ್ತೆಯ ಡಿ.ವಿ.ಹಳ್ಳಿ ಗ್ರಾಮದ ಶನಿಮಹಾತ್ಮ ದೇವಾಲಯದ ಹತ್ತಿರ ಅತೀ ವೇಗವಾಗಿ ಮತ್ತು ಅಜಾಗರೂಕತೆಯಿಂದ ಆರೋಪಿ ಚಲಾಯಿಸಿ, ನಡೆದುಕೊಂಡು ಹೋಗುತ್ತಿದ್ದ ಲಕ್ಷ್ಮಮ್ಮರವರಿಗೆ ಡಿಕ್ಕಿಪಡಿಸಿದ ಕಾರಣ ಈ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಈ ಬಗ್ಗೆ ಪೊಲೀಸರು ನನಗೆ ನೋಟೀಸ್ ನೀಡಿದ್ದು, ಅದಕ್ಕೆ ಮರುಉತ್ತರ ನೀಡಿ ನನ್ನ ಬಾಬ್ತು ದ್ವಿಚಕ್ರ ವಾಹನವನ್ನು ಸೂಕ್ತ ಇಂಡೆಮ್ನಿಟಿ ಬಾಂಡ್ ನ್ನು ನೀಡಿ ನನ್ನ ವಶಕ್ಕೆ ಪಡೆದುಕೊಂಡೆನು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>– ಆರೋಪಿತರ ಪರ ವಕೀಲರಿಂದಃ**– ಏನೂ ಇಲ್ಲ.

<u>ಮರು ವಿಚಾರಣೆಃ– ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ